ಶ್ರೀ ಮಿರಾಜುದ್ದೀನ್ ಎನ್. ಪಟೇಲ್ : ಮಾನ್ಯ ಅಧ್ಯಕ್ಷರೆ, ಈಗ ನಾಲ್ಕು ಕೋಟಿ ರೂಪಾಯಿಗಳು ಏನಿವೆ, ಅದರಲ್ಲಿ ಎರಡು ಕೋಟಿ ತೊಂಭತ್ತೈದು ಲಕ್ಷ ರೂಪಾಯಿಗಳನ್ನು ನಾವು ಡ್ರೈನೇಜಿಗೆ ಖರ್ಚು ಮಾಡಿದ್ದೇವೆ. ತಮಗೆ ಅದರ ಪಟ್ಟಿಯನ್ನು ಈಗಾಗಲೇ ಕೊಟ್ಟಿದ್ದೇವೆ. ಇನ್ನು ಬೇರೆ ವಿಚಾರಗಳು ಏನಿವೆ, ಅದರ ಬಗ್ಗೆ ಎ.ಡಿ.ಬಿ. ಮೀಟಿಂಗ್ ಅನ್ನು ಇವತ್ತು ಮಾಡುತ್ತಿದ್ದೇವೆ. ಈ ವಿಷಿಯಾ ಡೆವಲಪ್‌ಮೆಂಟ್ ಬ್ಯಾಂಕ್‌ನಿಂದ ಏನು ಪ್ರಾಜೆಕ್ಟ್ ಆಗುತ್ತಿದೆ ಅದೆಲ್ಲಾ ಕ್ಲಿಯರ್ ಆದಮೇಲೆ ನಾವು ಟೆಂಡರ್ ಕರೆದು ಕೆಲಸವನ್ನು ಮಾಡುತ್ತೇವೆ.

ಶ್ರೀ ಎನ್. ಯೋಗೀಶ್ ಭಟ್ : ಈಗ ಉಳಿದಿರುವಂತಹ ಡ್ರೈನೇಜ್ ಸೆಸ್ ಅನ್ನು ಏನು ಮಾಡುತ್ತೀರಾ?

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ : ಈ ಒಂದು ಕೋಟಿ ತೊಂಭತ್ತೆಂಟು ಲಕ್ಷ ರೂಪಾಯಿಗಳಿಗೆ ವಾಟರ್ ಸಪ್ಲೈಗೆ ಎಂದು ಸಪರೇಟಾಗಿ ಮಾಡಿದ್ದೇವೆ. ನಾವು ಡ್ರೈನೇಜ್‌ಗೆ ಒಂದು ಕೋಟಿ ತೊಂಭತ್ತೈದು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ.

ಹುಬ್ಬಳ್ಳಿಗೆ ತಹಶೀಲ್ದಾರರ ಕಛೇರಿ

401 -ಶ್ರೀ ಅಶೋಕ್ ಶಂಕರ್ ಕಾಟ್ವೆ (ಹುಬ್ಬಳ್ಳಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹುಬ್ಬಳ್ಳಿ ನಗರಕ್ಕೆ ಬೆಂಗಳೂರು ನಗರದಂತೆ ಹುಬ್ಬಳ್ಳಿ ನಗರ ಹಾಗೂ ಗ್ರಾಮೀಣಕ್ಕೆ ಪ್ರತ್ಯೇಕ ತಹಶೀಲ್ದಾರ್ ಕಾರ್ಯಾಲಯಗಳನ್ನು ತೆರೆಯುವುದು ಸರ್ಕಾರದ ಗಮನದಲ್ಲಿದೆಯೇ?*

ಆ) *ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?*

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) :

ಅ) ಹೌದು.

ಆ) ವಿಷಯ ಪರಿಶೀಲನೆಯಲ್ಲಿದೆ.

ಶ್ರೀ ಅಶೋಕ್ ಶಂಕರ್ ಕಾಟ್ವೆ : ಮಾನ್ಯ ಕಂದಾಯ ಸಚಿವರನ್ನು ನಾನು ಈ ಪ್ರಶ್ನೆ ಕೇಳುತ್ತೇನೆ.

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ಸಾಹುಕಾರ್ ಬಸಪ್ಪ ನವರ ವೇಷವನ್ನು ಧರಿಸಿ ಸಭೆಗೆ ಆಗಮಿಸಿದರು)

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಯಾರೋ ಸದಸ್ಯರಲ್ಲದೆ ಇರುವವರು ಈ ಸಭೆಯ ಒಳಗಡೆ ಬಂದರೆ ಹೇಗೆ? ತಾವು ಗೇಟ್‌ನಲ್ಲಿರುವ ಸೆಕ್ಯೂರಿಟಿಯವರ ಮೇಲೆ ಆಕ್ಷನ್ ತೆಗೆದುಕೊಳ್ಳಬೇಕು. ಇದು ಜಿಲ್ಲಾ ಪಂಚಾಯತ್ ಆಗಿಬಿಟ್ಟಿದೆ, ಇಲ್ಲಿಗೆ ಅಪರಿಚಿತರೆಲ್ಲಾ ಬರುವ ಹಾಗೆ ಆದರೆ ಹೇಗೆ?

(ಗೊಂದಲ)

ಅಧ್ಯಕ್ಷರು : ನನಗೆ ಇಲ್ಲಿ ಸದಸ್ಯರಾಗಿರುವವರು ಯಾರು, ಸದಸ್ಯರಲ್ಲದಿರುವವರು ಯಾರು ಎಂಬ ಪರಿಚಯವಿದೆ. ನನ್ನ ಸದಸ್ಯರು ಯಾರ್ಯಾರು ಯಾವುದೇ ಅವತಾರವನ್ನು ಹಾಕಿದರೂ, ಏನು ಗುಟ್ಟಾಗಿ ಮಾಡಿದರೂ, ಬಹಿರಂಗವಾಗಿ ಮಾಡಿದರೂ ಅದೆಲ್ಲಾ ನನಗೆ ಗೊತ್ತಾಗುತ್ತದೆ. ಅವರು ಯಾರೆಂದು ನನಗೆ ಗೊತ್ತಿದೆ, ಇವತ್ತು ಅವರು ಏಕೆ ಈ ಅವತಾರವನ್ನು ಎತ್ತಿದ್ದಾರೆಂಬುದೂ ಗೊತ್ತಿದೆ. ಆದರೆ ನಾನು ಈಗ ಹೇಳುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಮ್ಮ ಮಾನ್ಯ ವಾಟಾಳ್ ನಾಗರಾಜ್‌ರವರಿಗೆ ಈ ರೀತಿಯಾಗಿ ಅವಮಾನ ಮಾಡಿದರೆ ನಾನು ಸಹಿಸುವುದಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ಇದು ಎಷ್ಟನೇ ಅವತಾರವೆಂದು ಹೇಳಬೇಕಲ್ಲಾ, ಇನ್ನೂ ಇದ್ದರೆ ಅದನ್ನು ಪಟ್ಟಿಯಲ್ಲಿ ಇಟ್ಟುಕೊಂಡಿರುತ್ತೇವೆ.

ಶ್ರೀ ಅಶೋಕ್ ಶಂಕರ ಕಾಟ್ವೆ : ಸನ್ಮಾನ್ಯ ಅಧ್ಯಕ್ಷರೆ, ಕಳೆದ ನಾಲ್ಕೂವರೆ ವರ್ಷದಿಂದ ನನಗೆ ಇದೇ ಉತ್ತರ ಬರುತ್ತಿದೆ, ಗಮನಸೆಳೆಯುವ ಸೂಚನೆ, ಶೂನ್ಯ ವೇಳೆ, ಚುಕ್ಕೆ ಗುರುತಿನ ಪ್ರಶ್ನೆಯನ್ನು ಈ ಕುರಿತು ಕೇಳಿದ್ದೇನೆ. ಹುಬ್ಬಳ್ಳಿ ಮಹಾನಗರಪಾಲಿಕೆಯಲ್ಲಿ. ಅದಕ್ಕೆ ಪೂರ್ವ ಪಶ್ಚಿಮವಾಗಲಿ, ಹುಬ್ಬಳ್ಳಿ ನಗರವಾಗಲಿ ಈ ರೀತಿ ಎರಡು ತಹಸೀಲ್ದಾರ್ ಕಛೇರಿಯನ್ನು ಮಾಡಬೇಕೆಂದು ಒಂದೇ ಸಮನೆ ಕೇಳುತ್ತಿದ್ದೇನೆ. ಇದು ಜರೂರು ಇದೆಯೇ ಎಂದರೆ 'ಹೌದು' ಎನ್ನುತ್ತಾರೆ, ಯಾವಾಗ ಮಾಡುತ್ತೀರೆಂದರೆ 'ಪರಿಶೀಲನೆಯಲ್ಲಿದೆ' ಎನ್ನುತ್ತಾರೆ. ನಮ್ಮದು ನಾಲ್ಕೂವರೆ ವರ್ಷ ಮುಗಿಯುತ್ತಾ ಬಂತು, 50 - 60 ಪಟ್ಟು ಜನಸಂಖ್ಯೆ ಹೆಚ್ಚಾಗಿದೆ, ಅದು ಮಹಾನಗರ ವ್ಯಾಪ್ತಿಯಲ್ಲಿ ಬಂದಿದೆ. ಆ ತಹಸೀಲ್ದಾರ್ ಕಛೇರಿಯಲ್ಲಿ, ವೃದ್ಧಾಪ್ಯ ವೇತನ, ಅಂಗವಿಕಲರ ವೇತನ, ವಿದ್ಯಾರ್ಥಿಗಳಿಗೆ ಜಾತಿ ಪ್ರಮಾಣಪತ್ರ ವಿತರಿಸುವುದು -ಹೀಗೆ ಬಹಳಷ್ಟು ಕೆಲಸ ಆಗಬೇಕಾಗಿರುವುದಕ್ಕೆ ತೊಂದರೆಯಾಗುತ್ತಿದೆ, ಆದುದರಿಂದ ಅದನ್ನು ಆದಷ್ಟು ಬೇಗ ಯಾವಾಗ ಮಾಡುತ್ತೀರೆಂದು ಹೇಳಬೇಕು.

ಶ್ರೀ ಬಿ. ಸೋಮಶೇಖರ್ : ಆ ಪಟ್ಟಣದ ಮಹತ್ವ ಹಾಗೂ ಇರುವ ಕೆಲಸದ ಒತ್ತಡ, ಜನಸಂಖ್ಯೆಯ ಹೆಚ್ಚಳದಿಂದಾಗಿ ಸುಮಾರು ಆರೂವರೆ ಲಕ್ಷ ಜನಸಂಖ್ಯೆ ಇದೆ. ಮತ್ತೆ ಆ ಹುಬ್ಬಳ್ಳಿ ನಗರದಲ್ಲಿ ಆಗಾಗ್ಗೆ ಬಹಳಷ್ಟು ಮಂದಿ ಪ್ರತಿಷ್ಠಿತ ವ್ಯಕ್ತಿಗಳು ಹೋಗುತ್ತಿರುತ್ತಾರೆ, ಪ್ರೊಟೋಕಾಲ್ ಕೆಲಸ ಇರಬಹುದು ಹಾಗೂ ವಿದ್ಯಾರ್ಥಿಗಳ ಜನಸಂಖ್ಯೆ ಜಾಸ್ತಿ ಇದೆ. ಹೀಗಾಗಿ ಅದರ ಅವಶ್ಯಕತೆ ಇದೆ ಎಂದು ನಾನು ಹೇಳಿದ್ದೇನೆ. ಬೆಂಗಳೂರಿನಲ್ಲಿರುವಂತೆ ಅಲ್ಲಿಯೂ ಕೂಡ ಮತ್ತೊಂದು ತಾಲ್ಲೂಕು ಕಛೇರಿಯ ಅವಶ್ಯಕತೆ ಇದೆ. ಅದನ್ನು ವಿಧಿವಿಧಾನಗಳ ರೂಪದಲ್ಲಿ ಮಾಡಬೇಕಾಗುತ್ತದೆ, ಜೊತೆಗೆ ಇದರಲ್ಲಿ ಬೇರೆ ತಾಲ್ಲೂಕುಗಳ ವಿಚಾರಗಳು ಇರುವುದರಿಂದ ನಾವು ಆದಷ್ಟು ಶೀಘ್ರವಾಗಿ ಮಾಡುವುದಕ್ಕೆ ಪ್ರಯತ್ನ ಪಡುತ್ತೇವೆ.

ಶ್ರೀ ಬಿ. ನಂಜಾಮರಿ : ತಂದೆ ತಾಯಿಗಳನ್ನು ಅವನ ಮಗ ಮನೆಯಿಂದ ಓಡಿಸಿರುತ್ತಾನೆ, ಅವರಿಗೆ ವೃದ್ಧಾಪ್ಯ ವೇತನ ಸಿಗುವುದಿಲ್ಲ, ಅವರು ಏನು ಮಾಡಬೇಕು? ಅವರಿಗೆ ನೂರು

ರೂಪಾಯಿಗಳನ್ನು ಕೊಡುವುದನ್ನು, 'ನಾವು ಕೊಡುವುದಿಲ್ಲವೆಂದು' ತಹಸೀಲ್ದಾರ್ ಕಛೇರಿಯಲ್ಲಿ ತಿರಸ್ಕರಿಸುತ್ತಾರೆ. ಅಂತಹ ಮುದುಕ-ಮುದುಕಿಯರಿಗೆ ಊಟ ಕೊಡುವುದಕ್ಕೂ ಯಾರೂ ಇರುವುದಿಲ್ಲ, ಮಕ್ಕಳು ಅವರನ್ನು ಓಡಿಸಿರುತ್ತಾರೆ.

ಅಧ್ಯಕ್ಷರು : ನನ್ನ ಕಛೇರಿಯಲ್ಲಿ ಪ್ರತಿನಿತ್ಯ ಇಂತಹ ವಿಚಾರಗಳಿಗೆ ಸಂಬಂಧಿಸಿದವು ಬರುತ್ತವೆ, ನನ್ನ ಕಛೇರಿಗೆ ಬನ್ನಿ, ಹೇಗೆ ಅದನ್ನು ಅವರಿಗೆ ಕೊಡಿಸಬೇಕೆನ್ನುವುದನ್ನು ಹೇಳಿಕೊಡುತ್ತೇನೆ.

ಉತ್ತರಹಳ್ಳಿ ಕ್ಷೇತ್ರದಲ್ಲಿ ಆಶ್ರಯ ಮನೆಗಳು

412 - ಶ್ರೀ ಆರ್. ಅಶೋಕ್ (ಉತ್ತರಹಳ್ಳಿ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರಹಳ್ಳಿ ಕ್ಷೇತ್ರದಲ್ಲಿ ಆಶ್ರಯ ಯೋಜನೆಯಲ್ಲಿ ಎಷ್ಟು ನಿವೇಶನ ಹಂಚಲಾಗಿದೆ?

ಆ) ಹಂಚದೆ ಇದ್ದಲ್ಲಿ ಕಾರಣಗಳೇನು ಯಾವಾಗ ಹಂಚಲಾಗುವುದು?

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು) :

ಅ) ಹಂಚಿರುವುದಿಲ್ಲ.

ಆ) ಅತಿಕ್ರಮಣ ಭೂಸ್ವಾಧೀನತೆಯಿಂದ ಮುಕ್ತವಾಗಿರುವ ಸರ್ಕಾರಿ ಜಮೀನಿನ ಕೊರತೆ ಇರುವುದರಿಂದ ನಿವೇಶನಗಳನ್ನು ಹಂಚಿರುವುದಿಲ್ಲ.

ಉತ್ತರಹಳ್ಳಿ ಗ್ರಾಮದ ಸರ್ವೆ ನಂ. 87,88 ರಲ್ಲಿ 26 ಎಕರೆ ಸರ್ಕಾರಿ ಜಮೀನನ್ನು ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯಿತಿಗೆ ಜಮೀನನ್ನು ಒದಗಿಸುವ ಪ್ರಸ್ತಾವನೆ ತೀವ್ರ ಪರಿಶೀಲನೆಯಲ್ಲಿದ್ದು, ಜಮೀನು ಆಶ್ರಯ ಸಮಿತಿಗೆ ಒದಗಿಸಿದ ಕೂಡಲೇ ನಿವೇಶನಗಳನ್ನು ಹಂಚಲು ಕ್ರಮ ಕೈಗೊಳ್ಳಲಾಗುವುದು.

ಶ್ರೀ ಆರ್. ಅಶೋಕ್ : ಮಾನ್ಯ ಅಧ್ಯಕ್ಷರೆ, ಕಳೆದ ಐದು ವರ್ಷಗಳಲ್ಲಿ ಒಂದು ನಿವೇಶನವನ್ನೂ ಸಹ ಉತ್ತರಹಳ್ಳಿ ಕ್ಷೇತ್ರದಲ್ಲಿ ಹಂಚಿಕೆ ಮಾಡಿಲ್ಲ ಹಾಗೂ ಉತ್ತರಹಳ್ಳಿ ಕ್ಷೇತ್ರದಲ್ಲಿ ಯಾವುದೇ ಸರ್ಕಾರಿ ಜಮೀನಿಲ್ಲವೆಂದು ಮಾನ್ಯ ಮಂತ್ರಿಯವರು ಉತ್ತರವನ್ನು ಕೊಟ್ಟಿದ್ದಾರೆ. ಇಡೀ 224 ಕ್ಷೇತ್ರಗಳಲ್ಲಿ ಅತೀ ವಿಸ್ತಾರವಾದ ಕ್ಷೇತ್ರ ಎಂದರೆ, ಈ ಉತ್ತರಹಳ್ಳಿ ಕ್ಷೇತ್ರ ಅದು ಹತ್ತು ಲಕ್ಷ ಜನಸಂಖ್ಯೆವುಳ್ಳದ್ದು, ಇದರಲ್ಲಿ ಸಾವಿರಾರು ಎಕರೆ ಸರ್ಕಾರಿ ಜಮೀನಿದೆ. ಈಗಾಗಲೇ ನಾನು ಇನ್ನೂರು ಎಕರೆ ಜಮೀನಿಗೆ ಪ್ರಸ್ತಾವನೆಯನ್ನು ಕೊಟ್ಟಿದ್ದೇನೆ, ಆದರೆ ಕಳೆದ ಐದು ವರ್ಷಗಳಲ್ಲಿ ಈ ಆಶ್ರಯ ಯೋಜನೆಯಲ್ಲಿ ಒಂದು ನಿವೇಶನವೂ ಸಹ ಹಂಚಿಕೆಯಾಗಿಲ್ಲ. ಈ ಉತ್ತರ ಸರಿಯಿಲ್ಲವೆಂದು ತಮ್ಮ ಮುಖಾಂತರ ಮಾನ್ಯ ಸಚಿವರಿಗೆ ನಾನು ಹೇಳಬಯಸುತ್ತೇನೆ.

ಶ್ರೀ ಬಿ.ಎನ್. ಬಚ್ಚೇಗೌಡ (ಮಾನ್ಯ ಸಾರಿಗೆ ಸಚಿವರು) : ಮಾನ್ಯ ಸಭಾಧ್ಯಕ್ಷರೆ, ಈ ಆಶ್ರಯ ಯೋಜನೆಯಲ್ಲಿ ಒಂದು ಹಗರಣವಾಗಿತ್ತು. ಇದರಲ್ಲಿ 3157 ನಿವೇಶನಗಳನ್ನು ಕೊಟ್ಟಿದ್ದರು. ಈ ಬಗ್ಗೆ